ಪ್ರೋ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು

ಆ) ಪ್ರಸ್ತುತ ಜಾರಿಯಲ್ಲಿರುವ ಕನ್ನಡ ಭಾಷಾ ಮಾಧ್ಯಮದ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ. ಹೊಸದಾಗಿ ಆಕರ್ಷಣೀಯವಾಗಿ ರಚಿಸಲು ಕ್ರಮ ಕೈಗೊಳ್ಳಲಾಗಿದೆ

ಇ) 2004–05 ನ್ನು ಶೈಕ್ಷಣಿಕ ಸಾಲಿನಿಂದ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು 1 ರಿಂದ 4ನೇ ತರಗತಿಯವರೆಗಿನ ಕನ್ನಡ ಭಾಷಾ ಮಾಧ್ಯಮದ ಪಠ್ಯಪುಸ್ತಕಗಳನ್ನು ಹೊಸದಾಗಿ ರಚಿಸಲಾಗುತ್ತಿದೆ

ಈ) ಇದನ್ನು ರಾಜ್ಯದ ನಾಲ್ಕು ಕಂದಾಯ ವಿಭಾಗಗಳ ನಾಲ್ಕು ಜಿಲ್ಲೆಗಳಲ್ಲಿನ ನಾಲ್ಕು ತಾಲ್ಲೂಕು ಶಿಕ್ಷಣ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಲಾಗುವುದು

ಉ) ಈ ಸಲಹಾ ಸಮಿತಿಯು ಈ ಕೆಳಕಂಡವರನ್ನೊಳಗೊಂಡಿದೆ

1)	ಪ್ರೊ ಯು ಆರ್ ಅನಂತಮೂರ್ತಿ	ಅಧ್ಯಕ್ಷರು
2)	ಡಾ ಸಿದ್ದಲಿಂಗಯ್ಯ	ಸದಸ್ಯರು
3)	ಡಾ ಮಲ್ಲಿಕಾ ಘಂಟಿ	ಸದಸ್ಯರು
4)	ಡಾ ವಾಸವಿ	ಸದಸ್ಯರು
5)	ಪ್ರೋ ಜಯಲಕ್ಷ್ಮಿ	ಸದಸ್ಯರು
6)	ಡಾ ಹೇಮಾ ಪಟ್ಟಣಶೆಟ್ಟಿ	ಸದಸ್ಯರು
7)	ಡಾ ಷಡಕ್ಷರಪ್ಪ ಶೆಟ್ಟರ್	ಸದಸ್ಯರು
8)	ಡಾ ಮಮ್ತಾಜ್ ಆಲಿಖಾನ್	ಸದಸ್ಯರು

ಪಠ್ಯಪುಸ್ತಕ ರಚನೆ ಕಾರ್ಯವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ವಹಿಸಿದೆ

ರಾಜ್ಯದಲ್ಲಿ ಕಾಲೇಜು ಶಿಕ್ಷಣ ನಿರ್ದೇಶನಾಲಯವನ್ನು ಮುಚ್ಚಲು ತೀರ್ಮಾನಿಸಿರುವುದು

25 (508) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾಲೇಜು ಶಿಕ್ಷಣ ನಿರ್ದೇಶನಾಲಯದಲ್ಲಿ ಎಷ್ಟು ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ ಹುದ್ದೆವಾರು ವಿವರ ನೀಡುವುದು

ಆ) ಸರ್ಕಾರ ಈ ನಿರ್ದೇಶನಾಲಯವನ್ನು ಮುಚ್ಚಲು ತೀರ್ಮಾನಿಸಿದೆಯೇ ಹಾಗಿದ್ದಲ್ಲಿ ಕಾರಣ ನೀಡುವುದು

ಇ) ಈ ನಿರ್ದೇಶನಾಲಯವನ್ನು ಪೂರ್ಣವಾಗಿ ಮುಚ್ಚಿದಲ್ಲಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು

ಈ) ಈ ನಿರ್ದೇಶನಾಲಯ ನಿರ್ವಹಿಸುತ್ತಿದ್ದ ಕಾರ್ಯವನ್ನು ಸಂಬಂಧಿಸಿದ ವಿಶ್ವ ವಿದ್ಯಾಲಯಗಳಿಗೆ ಹಸ್ತಾಂತರಿಸಲಾಗುವುದೇ

ಉ) ಈಗಾಗಲೇ ಪರಿಕ್ಷೆಗಳನ್ನು ಹಾಗೂ ಮೌಲ್ಯಮಾಪನವನ್ನು ನಿಗಧಿತ ಸಮಯದಲ್ಲಿ ಮುಗಿಸಲು ವಿಫಲವಾಗಿರುವ ಈ ವಿಶ್ವವಿದ್ಯಾಲಯಗಳು ಈ ಹೆಚ್ಚುವರಿ ಹೊಣೆಗಾರಿಕೆಯನ್ನು ಹೊರಲು ಸಾಧ್ಯವೇ?

ಡಾ॥ ಪರಮೇಶ್ವರ್ (ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು)

ಅ) ಒಟ್ಟು 314 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹುದ್ದೆವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ

ಆ)ಇ) ಮತ್ತುಈ) ಉ) ಸರ್ಕಾರದ ಕಾರ್ಯದರ್ಶಿ ನೀತಿಯಾಗಿದ್ದು ಪರಿಶೀಲನೆಯ ಹಂತದಲ್ಲಿದೆ

ಅನುಬಂಧ – I

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು

ಇಲಾಖೆಯ ಕೇಂದ್ರ ಕಛೇರಿ ಮತ್ತು ಪ್ರಾದೇಶಿಕ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವೃಂದವಾರು ವಿವರ

ಕ್ರಮ ಸಂಖ್ಯೆ	ಕಛೇರಿಯ ಹೆಸರು	ಕೇಂದ್ರ ಕಛೇರಿ	ಪ್ರಾದೇಶಿಕ ಕಛೇರಿ ಬೆಂಗಳೂರು	ಪ್ರಾದೇಶಿಕ ಕಛೇರಿ ಮೈಸೂರು	ಪ್ರಾದೇಶಿಕ ಕಛೇರಿ ಧಾರವಾಡ	ಪ್ರಾದೇಶಿಕ ಕಛೇರಿ ಮಂಗಳೂರು	ಪ್ರಾದೇಶಿಕ ಕಛೇರಿ ಗುಲ್ಬರ್ಗಾ	ಪ್ರಾದೇಶಿಕ ಕಛೇರಿ ವಿಜಯಪುರ	ಒಟ್ಟು
1	2	3	4	5	6	7	8	9	10
1	ಆಯುಕ್ತರು	1	0	0	0	0	0	0	1
2	ನಿರ್ದೇಶಕರು	1	0	0	0	0	0	0	1
3	ಹೆಚ್ಚುವರಿ ನಿರ್ದೇಶಕರು	1	0	0	0	0	0	0	1
4	ಮುಖ್ಯ ಆಡಳಿತಾಧಿಕಾರಿಗಳು	1	0	0	0	0	0	0	1
5	ಜಂಟಿ ನಿರ್ದೇಶಕರು	2	1	1	1	1	1	1	8
6	ವಿಶೇಷಾಧಿಕಾರಿಗಳು	1	0	0	0	0	0	0	1
7	ಉಪ ನಿರ್ದೇಶಕರು	2	0	0	1	0	0	0	3
8	ಸಹಾಯಕ ನಿರ್ದೇಶಕರು	2	3	3	1	2	3	2	16
9	ಲೆಕ್ಕಾಧಿಕಾರಿಗಳು	2	0	1	1	0	0	0	4
10	ಮ್ಯಾನೇಜರ್	3	1	1	1	1	0	0	7
11	ಲೆಕ್ಕ ಅಧೀಕ್ಷಕರು	6	1	1	1	1	1	1	12

1	2	3		4	5	6	7	8	9	10
12	ಅಧೀಕ್ಷರು	24	3	0	3	2	1	2		35
13	ಪ್ರಥಮ ದರ್ಜೆ ಸಹಾಯಕರು	28	4	3	5	1	2	3		46
14	ಶೀಘ್ರಲಿಪಿಗಾರರು	6	1	1	2	0	0	1		11
15	ದ್ವಿತೀಯ ದರ್ಜೆ ಸಹಾಯಕರು	35	7	4	8	3	4	2		63
16	ಬೆರಳಚ್ಚುಗಾರರು	16	3	0	1	1	1	1		23
17	ವಾಹನ ಚಾಲಕರು	5	0	1	1	1	1	1		10
18	ಅಟೆಂಡರ್	18	5	0	2	3	2	2		32
19	ಪರಿಚಾರಕರು	20	3	3	5	3	4	1		39
		174	32	19	33	19	20	17		314

ರಾಜ್ಯದಲ್ಲಿ ಕುಡಿಯುವ ನೀರು ಸರಬರಾಜು

26 (210) ಶ್ರೀ ರವೀಂದ್ರನಾಥ್ ಎಸ್ ಎ (ಮಾಯಕೊಂಡ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನದಿ ನೀರು ಬಳಸಿಕೊಂಡು ಕೆರೆ – ಕಟ್ಟೆಗಳಿಗೆ ತುಂಬಿಸಿ ಜನ ಜಾನುವಾರುಗಳಿಗೆ ಕುಡಿಯಲು ನೀರು ಪೂರೈಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ

ಆ) ಯೋಜನೆಯ ರೂಪು--ರೇಷೆಗಳೇನು ಇದಕ್ಕೆ ತಗಲುವ ವೆಚ್ಚ, ಪ್ರಸ್ತಾವಿತ ಯೋಜನೆಯ ನೀರು ಸಂಗ್ರಹಣದ ಗುರಿ ಹಾಗೂ ನೀರು ಪೂರೈಕೆಯನ್ನು ಹೇಗೆ ನಿರ್ವಹಿಸಲಾಗುತ್ತದೆ

ಇ) ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ರೂಪಿಸಲಾಗಿದ್ದರೆ, ಕುಡಿಯಲು ಯೋಗ್ಯವಾಗಿ ಪರಿವರ್ತಿಸುವ ಕೆಲಸದ ಬಗ್ಗೆ ಕಾಳಜಿ ವಹಿಸಲಾಗುವುದೇ

ಈ) ಈಗಾಗಲೇ ಈ ಯೋಜನೆ ಕಾರ್ಯಗತಗೊಂಡಿದೆಯೇ ಯಾವ ಯಾವ ಜಿಲ್ಲೆಯಲ್ಲಿ ಜಾರಿಯಾಗಿದೆ, ಸದರಿ ಯೋಜನೆಯು ತಾತ್ಕಾಲಿಕವೇ ಅಥವಾ ಸಂಪೂರ್ಣ ಶಾಶ್ವತ ಯೋಜನೆಯೇ? (ವಿವರ ನೀಡುವುದು)

ಶ್ರೀ ಕೆ ಬಿ ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಅವಶ್ಯಕತೆಯನುಸಾರ ಆಯಾ ಜಿಲ್ಲಾ ಪಂಚಾಯತಿಗಳು ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವದನ್ವಯ ಇಂತಹ ಯೋಜನೆಗಳನ್ನು ರೂಪಿಸಲು ಅವಕಾಶವಿದೆ

ಆ) ಈ ಯೋಜನೆಗಳ ವೆಚ್ಚ ಸ್ಥಳೀಯ ವಾಸ್ತವಿಕತೆಯನ್ನು ಆಧರಿಸಿರುತ್ತದೆ ಕೆರೆಗಳಿಗೆ ನೀರು ತುಂಬಿಸುವುದರಿಂದ ಅಲ್ಲಿನ ಅಂತರ್ಜಲ ಅಭಿವೃದ್ಧಿಗೆ ಮತ್ತು ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅನುಕೂಲವಾಗುತ್ತದೆ ಪೈಪ್‌ಗಳ ಮೂಲಕ ನದಿಯ ನೀರನ್ನು ಕೆರೆ ಕಟ್ಟೆಗಳಿಗೆ ಪಂಪ್